
ಕಲ್ಯಾಣಕಿರಣ

ಸಂಪುಟ : ೧೪
ಸಂಚಿಕೆ : ೫
ಸೆಪ್ಟಂಬರ್ ೧೯೮೫
ಬಸವ ಶಕೆ : ೮೪೬
ಬೆಲೆ : ೧-೦೦



ಬಸವ ತತ್ತ್ವ ಪರಿಷತ್

ನಾಲ್ಕನೆಯ ಸಮಾವೇಶದ ಮುಕ್ತಾಯ ಸಮಾರಂಭ.

ಸ್ಥಳ :

ಶ್ರೀ ಪುಟ್ಟಣ್ಣ ಶೆಟ್ಟಿ ಟೌನ್‌ಹಾಲ್, ಬೆಂಗಳೂರು

ಸಮಯ :

ಭಾನುವಾರ ೧೩-೧೦-೮೫ ರಂದು ಬೆಳಿಗ್ಗೆ ೯-೩೦ ಕ್ಕೆ.

ಸನ್ನಿಧಿ :

ಪೂಜ್ಯ ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಮುಖ್ಯ ಅತಿಥಿಗಳು :

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು, ಜನಪ್ರಿಯ ನೇತಾರರೂ ಆದ

ಶ್ರೀ ರಾಮಕೃಷ್ಣ ಹೆಗಡೆ

ಅತಿಥಿಗಳು :

ಶ್ರೀ ಜೀವರಾಜ ಆಳ್ವ : ವಾರ್ತಾ ಮತ್ತು ಪ್ರಸಾರ ಖಾತೆ ಸಚಿವರು
ಶ್ರೀ ಜೆ. ಎಚ್. ದೇಶಮುಖ : ವಿದ್ಯುಚ್ಛಕ್ತಿ ಮಂತ್ರಿಗಳು
ಶ್ರೀ ಎಂ. ಪಿ. ಪ್ರಕಾಶ : ಕೃಷಿ ಸಚಿವರು
ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ : ಶಾಸಕರು

ಅಧ್ಯಕ್ಷತೆ :

ಶ್ರೀ ಬಿ. ಡಿ. ಜತ್ತಿ

[ಬಸವ ಸಮಿತಿ ಅಧ್ಯಕ್ಷರು ಮತ್ತು ಮಾಜಿ ಉಪರಾಷ್ಟ್ರಪತಿಗಳು]

ಕಾರ್ಯದರ್ಶಿ :
ಶ್ರೀ ಎಸ್. ಪುಟ್ಟರುದ್ರ

ಅಧ್ಯಕ್ಷೆ :
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ತತ್ತ್ವ ಪರಿಷತ್, ಬೆಂಗಳೂರು

ಕಲ್ಯಾಣ ಕಿರಣ

ಸಂಪುಟ : ೧೪ ಸಂಚಿಕೆ : ೫ ಬಸವ ಶಕೆ : ೮೪೭ ಸೆಪ್ಟಂಬರ್, ೧೯೮೫

ಶರಣ ಗೀತೆ

ಎನ್ನ ಕರೆಯ ಬನ್ನಿ

ಹೆಮ್ಮೆಗಳು ನಾ ನಿಮ್ಮ ನೆಮ್ಮಿಕೊಂಡಿರುವೆನ್ನೆ
ಗಮ್ಮನೇ ಎನ್ನುವನು ಕರೆಯಬನ್ನಿ ॥ಪ॥

ಸುವ್ವಿ ಚೆನ್ನಣ್ಣನಿಗೆ ಸುವ್ವಿ ಮಡಿವಾಳನಿಗೆ
ಸುವ್ವಿ ನಮ್ಮಪ್ಪ ಬಸವಯ್ಯನಡಿಗೆ ।
ಸುವ್ವಿ ಅಜಗಣ್ಣನಿಗೆ ಸುವ್ವಿ ಸತ್ಯಣ್ಣನಿಗೆ
ಸುವ್ವಿ ನಮ್ಮಯ್ಯ ಪ್ರಭುರಾಯನಡಿ ॥೧॥

ಸುವ್ವಿ ಹರಳಯ್ಯನಿಗೆ ಸುವ್ವಿ ಧೂಳಯ್ಯನಿಗೆ
ಸುವ್ವಿ ನಮ್ಮಯ್ಯ ಶ್ವಪಚಯ್ಯನಡಿಗೆ ।
ಸುವ್ವಿ ಭೀಮಯ್ಯನಿಗೆ ಸುವ್ವಿ ಕಕ್ಕಯ್ಯನಿಗೆ
ಸುವ್ವಿ ನಮ್ಮಯ್ಯ ಚೆನ್ನಯ್ಯನಡಿಗೆ ॥೨॥

ನಮ್ಮವರ ಪಾಡುವೆನು ನಮ್ಮವರ ಪೊಗಳುವೆನು
ನಮ್ಮವರನಾವಗಂ ಹರಸುತಿಹೆನು ।
ನಮ್ಮವರು ಬರುವುದನ್ನು ಉಮ್ಮಳಿಸಿ ನೋಡುವೆನು
ಹಮ್ಮಿಸುವೆ ಮನದೊಳಗೆ ಬಾರದಿರಲು ॥ ೩ ॥

ಕುಟ್ಟುತ್ತ ಬೀಸುತ್ತ ನೆಟ್ಟನೇ ನಮ್ಮ ಒಡ
ಹುಟ್ಟಿದ ಪುರಾತನರ ಹಾಡುತಿಹೆನು ।

ಕಷ್ಟ ಘನ ಮರ್ತ್ಯದ ಬಟ್ಟೆಯನು ಒಲ್ಲೆ ಕೃಪೆ
ಹುಟ್ಟದೇ ನಮ್ಮವರು ಕರೆಯಿರಯ್ಯ ॥ ೪ ॥

ನೀರ ಹೊಳೆಯಲಿ ನಿಂದು ದಾರಿಯನು ನೋಡುವೆನು
ಬಾರದಿರೆ ಮನದೊಳಗೆ ಕರಗಿ ಕೊರಗಿ ।
ಆರೈದು ಮತ್ತೊಮ್ಮೆ ದೂರ ದೃಷ್ಟಿಯನಿತ್ತು
ಸಾರಿ ನೋಡುವೆ ನಿಲುಕಿ ಅಳಲಿ ಬಳಲಿ ॥ ೫ ॥

ಬಂದವರ ಬರುವವರ ನಿಂದವರ ನೆರೆದವರ
ಕುಂದದಲೆ ಕೇಳುವೆನು ನಮ್ಮವರನು ।
ಹಿಂದಾದ ದುಃಖದಲ್ಲಿ ನೊಂದೆನ್ನೈ ನಮ್ಮವರು
ಎಂದಿಗೇ ಎನ್ನುವನು ಕರೆಯಬಹರೋ ॥ ೬ ॥

ಪದುಳವೇ ನಮ್ಮವರ ಪದಪದ್ಮ ಎನ್ನುವೆನು
ಪದಪಿಂದ ಕರೆದೊಯ್ಯಲೊಲ್ಲರೇಕೆ ।
ಉದಯಾಸ್ತಮಾನದಲಿ ಕುದಿದು ಕೋಟಲೆಗೊಂಬೆ
ಹೃದಯ ತಾ ಕರಗದೇ ನಮ್ಮವರಿಗೆ ॥ ೭ ॥

ಅಳಲುವೆನು ಮನದೊಳಗೆ ಬಳಲುವೆನು ಬಾರದಿರೆ
ಕಳೆಯೇರುವೆನು ಒಮ್ಮೆ ನೆನೆದು ನೆನೆದು ।
ಮಲಹರಣ ಶರಣರಾ ಬಲವ ನೋಡುವೆನೊಮ್ಮೆ
ಸಲೆಯೆನ್ನ ಕನಸಿಂಗೆ ಬಾರರೆನುತ ॥ ೮ ॥

ಹಿಂದುಳಿಯಿತಮವಾಸ್ಯೆ ಮುಂದೆ ಹುಣ್ಣಿಮೆ ಬಂತು
ಎಂದಿಗೇ ಎನ್ನನ್ನು ಕರೆಯಬಹರೋ ।
ನೊಂದು ಸುಯ್ಗರೆಯುವೆನು ಬೆಂದು ಬೆಂಡಾಗುವೆನು
ಚಂದವೇ ತಮಗೆನ್ನ ನೋಡದಿಹುದು ॥ ೯ ॥

ತರಗೆಲೆಯು ಗಿರುಕೆನಲು ಹೊರಗೆ ನಾನಾಲಿಸುವೆ
ಬರವಿಲ್ಲದಿರೆ ಮನದಿ ಸುಯ್ಗರೆವೆನು ।
ಪರರ ಶಿಶುವೆಂದೆನುತ ಶರಣರೂ ಎನ್ನುವನು
ಮರೆದರೋ ಎಂದೆನುತ ಹೆದರುತಿಹೆನು ॥ ೧೦ ॥

ಶರಣರೊಳು ಸುಖ ದುಃಖ ದಿರವ ಹೇಳುವೆ ನಾನು
ಪರರೆನ್ನ ಚಿಂತೆಯನ್ನರಿಯರಾಗಿ ।
ಅರಸು ಷಡಕ್ಷರಿಯ ವರನೆನ್ನ ಕಾಡದಿರೆ
ಶರಣರಿಗೆ ಪೇಳಿ ನಾ ಕೇಳ್ವೆನಯ್ಯಾ ॥ ೧೧ ॥

— ಮುಪ್ಪಿನ ಷಡಕ್ಷರಿಗಳು

ಶರಣರೇ ಮಾತಾಪಿತರು.

ವ್ಯಾಖ್ಯಾನ :— **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**

ವಚನ ಸಾಹಿತ್ಯದಲ್ಲಿ ತುಂಬಾ ಮಧುರವಾದ ಸಂಬಂಧ ಶರಣಸತಿ–ಲಿಂಗಪತಿಯರದು. ಶರಣನು ವಿವಿಧ ಕಲ್ಪನೆಗಳ ಕಣ್ಣಿನಲ್ಲಿ ದೇವನನ್ನು ಕಂಡು, ತನ್ನ ಭಾವನಾಪ್ರವಾಹವನ್ನು ವೈವಿಧ್ಯಮಯವಾಗಿ ಹರಿಯಬಿಡುವನು. ಈ ಶರಣಸತಿ–ಲಿಂಗಪತಿಯರ ಮಧ್ಯದಲ್ಲಿ ಬರುವ ಮತ್ತಿತರು ಎಂದರೆ ಗುರುವು ಮತ್ತು ಶರಣರು. ಅದರಲ್ಲಿಯೂ ಆದಿ ಶರಣರಾದ ಅಪ್ಪ ಬಸವಣ್ಣ, ಅಣ್ಣ ಚನ್ನಬಸವಣ್ಣ, ಅವ್ವ ನೀಲಾಂಬಿಕೆ ಮುಂತಾದ ಬಳಗದ ಬಗ್ಗೆ ಶರಣಸಾಧಕರಿಗೆ ಅತೀವ ‘ ಮೋಹ ’ ! ಹೆಂಗರುಳಿನ, ಸತಿ ಹೃದಯದವರಾದ ಮುಪ್ಪಿನ ಷಡಕ್ಷರಿಗಳಂತಹವರಂತೂ ಈ ತವರಿನ ಬಗ್ಗೆ ವಿಪರೀತ ಮೋಹ–ಮಮತೆ ಹೊಂದಿದವರು. ಬಹುಶಃ ಅಕ್ಕ ಮಹಾದೇವಿಯ ಭಕ್ತಿಯ ಬಗೆ ಮುಪ್ಪಿನ ಷಡಕ್ಷರಿಗಳ ಮೇಲೆ ಬಹಳಷ್ಟು ಪ್ರಭಾವ ಬೀರಿದಂತೆ ಕಾಣುತ್ತದೆ. ಅಂತೆಯೇ ಅಕ್ಕಮಹಾದೇವಿ ಹೇಳುವ,

ಎನ್ನ ಮಾತೆ ಪಿತರು ಅಮರಗಣಂಗಳು
ಎನ್ನ ತವರು ಮನೆ ಕಲ್ಯಾಣವು
ಕರುಣಿ ಶ್ರೀ ಶೈಲ ಮಲ್ಲಿಕಾರ್ಜುನನು ಒಲಿಯೆ
ಮರಳಿತ್ತ ಬಾರೆನವ್ವಾ ತಾಯೆ ॥
ಹೋದನೂರಿಗೆ ಇದ್ದೆ ನಾನಲ್ಲಿ
ಹೋದಡೆ ಮರಳಿತ್ತ ಬಾರೆನವ್ವಾ ತಾಯೆ ॥

ಎಂಬ ಭಾವ “ ಹೆಮ್ಮಗಳು ನಾ ನಿಮ್ಮ ” ಎಂಬ ಪದ್ಯದಲ್ಲಿ ಸುಂದರ ಬಳ್ಳಿಯಾಗಿ ಚೆಲ್ಲವರಿದಿದೆ.

ತುಂಬಾ ಮಮತೆ–ಮೋಹಗಳ ಹಾಲು–ತುಪ್ಪವನ್ನುಂಡು ಮಗಳು ಬೆಳೆದಿದ್ದಾಳೆ. ಲೌಕಿಕ ನೀತಿ–ನಿಯಮದಂತೆ ಮದುವೆ ಮಾಡಿಕೊಟ್ಟು, ಗಂಡನ ಮನೆಗೆ ತೌರಿನವರು ಕಳಿಸಿಕೊಟ್ಟಿದ್ದಾರೆ. ಆಕೆಗೋ ಇನ್ನೂ ತವರಿನ ನೆನಪು ಕಮ್ಮಿಯಾಗಿಲ್ಲ. ಅಷ್ಟರಲ್ಲಿ ಯಾವುದಾದರೂ ಹಬ್ಬ–ಹುಣ್ಣಿಮೆ ಬಂದೀತೇನೋ, ಆ ನೆಪದಿಂದ ತವರಿನವರು ಯಾರಾದರೂ ಕರೆಯಲು ಬರುವರೇನೋ ಎಂದು ಕಾತುರದಿಂದ ಕಾಯುವಳು. ಅವಳ ಕಣ್ಣೆಲ್ಲ ಬಾಗಿಲ ಮೇಲೆ, ತವರೂರ ದಾರಿಯ ಮೇಲೆ. ಹೊಸ ವಾತಾವರಣಕ್ಕೆ, ನವವಧುವಾಗಿ ಬಂದಿದ್ದಾಳೆ. ಅನೇಕ ಬಗೆಯ ಕಷ್ಟಗಳನ್ನು ಅನುಭವಿಸಿರಲೂ ಸಾಕು. ಅದನ್ನೆಲ್ಲ ತನ್ನ ತವರಿನವರ ಮುಂದೆ ಹೇಳಿಕೊಂಡು ತನ್ನ ಮನಸ್ಸನ್ನು ಹಗುರ ಮಾಡಿಕೊಳ್ಳಬೇಕೆಂಬ ತುಡಿತಬೇರೆ. ಹೀಗಾಗಿ ಒಂದೊಂದು ಗಳಿಗೆಯೂ ಸುದೀರ್ಘ. ಇಂಥ ಒಂದು ಲೌಕಿಕ ಅನುಭವಕ್ಕಿಂತಲೂ ಉತ್ಕಟವಿದೆ ಮುಪ್ಪಿನ ಷಡಕ್ಷರಿಗಳ ಅನುಭವ.

ಇಹಲೋಕವೆಂಬ ಪತಿಗೃಹಕ್ಕೆ ಈ ಜೀವ ಬಂದಾಗಿದೆ; ಪರಮಾರ್ಥಲೋಕವೆಂಬ ತೌರು ಅಥವಾ ಮೂಲನೆಲೆಯಿಂದ ಬಂದ ಜೀವ ಬಲು ಬಾಧೆಗೆ ಒಳಗಾಗಿದೆ. ಈ ವಾತಾವರಣ, ವಿಲಾಸ, ಸುಖಗಳಿಂದ ಆ ಜೀವಕ್ಕೆ ನೆಮ್ಮದಿಯಿಲ್ಲ. ಜೇನುಹುಳ ಜೇನು ತುಪ್ಪದ ಪಾತ್ರೆಯೊಳಗೆ ಬಿದ್ದರೆ ಆನಂದ ಹೊಂದಲು ಸಾಧ್ಯವೆ ? ಇಲ್ಲ ; ಅದಕ್ಕೆ ಪುಷ್ಪದ ಸ್ವಾಭಾವಿಕ ಮಕರಂದ ಬೇಕು. ಹಾಗೆಯೇ ಆತ್ಮಭ್ರಮರಕ್ಕೆ ಬೇಕಾದುದು ಶಿವಾನುಭವದ ಮಕರಂದವೇ ವಿನಾ, ವೈಭವ-ವಿಲಾಸಗಳ ಜೇನುತುಪ್ಪವಲ್ಲ. ಅಂಥ ದಿವ್ಯಾನುಭವ ಕೊಡಿಸುವ ಸಾಧನ ಶರಣರ ಕರುಣೆ, ಗುರುಕರುಣೆ. ಅದಕ್ಕಾಗಿ ಜೀವವು ಹೀಗೆ ಹಂಬಲಿಸುವುದು.

ಪಲ್ಲವಿ :— ನಾನು, ಶರಣರೇ ನಿಮ್ಮ ಹಿರಿಯಮಗಳು. ನಿಮ್ಮನ್ನೇ ನಂಬಿಕೊಂಡು ಕಾದಿರುವೆ. ನೆನಪಿಸಿಕೊಂಡು ನೀವು ನನ್ನನ್ನು ಕರೆಯ ಬರುತ್ತಿಲ್ಲ.

1. ಅಣ್ಣ ಚನ್ನಬಸವಣ್ಣನಿಗೆ ಜಯವಾಗಲಿ. ಅವನೇಕೆ ಬರಲಿಲ್ಲ ? ನಮ್ಮ ಅಪ್ಪನ ಮಹಾಮನೆಯ ಹಿರಿಯ ಪ್ರತಿನಿಧಿ ಮಡಿವಾಳಯ್ಯನಾದರೂ ಬರಬಾರದೆ ? ಹೋಗಲೀ ಇವರೆಲ್ಲರೂ ಮರೆತರಷ್ಟೇ, ತಾಯಿ-ತಂದೆಗಳಿಗೆ ಇರುವ ಅಂತಃಕರುಣ ಮತ್ತೆ ಯಾರಿಗೆ ಇರಲು ಸಾಧ್ಯ ? ನಮ್ಮಪ್ಪ ಬಸವಯ್ಯನವರಾದರೂ ಕರೆಯಬರಬಾರದೆ ? ಅಪ್ಪ ಬಸವಣ್ಣನಿಗೆ ಕಾರ್ಯಭಾರ ಬಹಳ. ಅಜಗಣ್ಣ, ಸತ್ಯಣ್ಣ, ತಾತ ಪ್ರಭುರಾಯ-ಮುಂತಾದ ಎಷ್ಟು ಜನ ಶರಣಪುಂಗವರಿಲ್ಲ. ? ಅವರಾರಾದರೂ ಬರಬಾರದೆ ?

2. ನಮ್ಮಪ್ಪ ಬಸವಣ್ಣನ ಮನೆ ಮಹಾಮನೆ. ಅಲ್ಲಿ ಹರಳಯ್ಯ ಶರಣರುಂಟು, ಧೂಳಯ್ಯನವರು, ಶ್ವಪಚಯ್ಯ, ಭೀಮಯ್ಯ, ಕಕ್ಕಯ್ಯ, ಚೆನ್ನಯ್ಯ ಮುಂತಾದ ಅನೇಕ ಅನುಭಾವಿಗಳುಂಟು.

3. ನನಗೆ ಈ ಇಹದಲ್ಲಿ ಹೊತ್ತುಗಳೆಯುವುದೇ ಕಷ್ಟಸಾಧ್ಯವಾಗಿದೆ. ಒಂದು ಗಳಿಗೆ ಯುಗವಾಗಿ ಕಾಣಬರುತ್ತಿದೆ. ಅದಕ್ಕಾಗಿ ನಮ್ಮವರನ್ನು ಕುರಿತು ಹಾಡುವೆ, ಪೊಗಳುವೆ. ಯಾವಾಗಲೂ ಅವರನ್ನೇ ಹರಸಿ, ಹಾರೈಸುವೆ. ಶಿವಪಥವ ಹಿಡಿದು ಸಾಗಿ ಯಶಸ್ವಿಯಾದ ಈ ಬಂಧುಗಳು ಬರುವುದನ್ನೇ ಉತ್ಕಟತೆಯಿಂದ ಕಾಯುವೆ. ಅವರು ಬರದೆ ಇದ್ದಾಗ ಮನಸ್ಸಿನಲ್ಲಿ ಮುನಿಸಿನ ಅಲೆ ಹಾಯುತ್ತದೆ.

4. ಲೌಕಿಕ ವಧುವು ಕುಟ್ಟುವಾಗ, ಬೀಸುವಾಗ ಒಡಹುಟ್ಟಿದವರನ್ನು ನೆನೆಯುವಂತೆ ನಾನು ನಮ್ಮ ಶರಣರನ್ನು ಕುರಿತು ಹಾಡುವೆ. ನಿಜವಾಗಿ ಹೇಳಬೇಕೆಂದರೆ ಈ ಮರ್ತ್ಯಲೋಕವೆಂಬ ಅತ್ತೆ ಮನೆಯ ಕಷ್ಟ ಬಲು ತೀವ್ರ. ಈ ದಾರಿಯನ್ನು ನಾನೊಲ್ಲೆ. ನನ್ನ ತೌರಿನ ಶರಣರಿಗೆ ಇನ್ನಾದರೂ ಕೃಪೆ ಬಾರದೆ ? ಬಂದು ಕರೆಯಿರಯ್ಯಾ.

5. ಊರ ಹೊರಗೆ ಬಟ್ಟೆ ತೊಳೆಯುವ, ನೀರು ತರುವ ನೆಪದಿಂದ

ಸೊಸೆಯೂ ಹೊಳೆಗೆ ಹೋಗುವಳು. ಆದರೆ ಕಣ್ಣೆಲ್ಲ ತೌರಿನ ದಾರಿಯ ಮೇಲೆ ! ದೂರದವರೆಗೆ ದೃಷ್ಟಿ ಚೆಲ್ಲಿ ಅಳಲಿ, ಬಳಲಿ, ಕಣ್ಣಿಟ್ಟು ಗಮನಿಸುವಳಾ ದಾರಿಯನ್ನು. ಅದೇ ರೀತಿ ನಾನು ಲೌಕಿಕದ ಕರ್ತವ್ಯ, ಸಂಚಾರ, ಬೋಧನೆ ಎಲ್ಲದರಲ್ಲಿ ತೊಡಗಿದ್ದರೂ, ನನ್ನ ಮನಸ್ಸು, ದೃಷ್ಟಿ, ಚಿಂತನ ಎಲ್ಲವು ಶರಣರ ಕಡೆಗೆ.

6. ಆ ಸೊಸೆ ಪರವೂರಿಂದ ಬಂದವರನ್ನು ಕೇಳುವಳು ; ಇನ್ನಾರಾದರೂ ಬರುವವರಿದ್ದಾರೆಯೆ ಎಂದೂ ಅವರನ್ನು ಕೇಳುವಳು. ತನ್ನ ಸಮೀಪದಲ್ಲಿ ನಿಂತವರನ್ನು, ಸುತ್ತುವರಿದವರನ್ನು ಸಂಕೋಚವಿಲ್ಲದೆ ಕೇಳುವಳು. ಅವರ ಮುಂದೆ ಹೇಳಿಬಿಡುವಳು, " ನನ್ನ ದುಃಖ ಮಿತಿಮೀರಿದೆ. ನನ್ನನ್ನು ಎಂದಿಗೆ ಕರೆಯಬರುವರೋ " ಎಂದು.

ನಾನಾದರೂ ನನ್ನ ಕಣ್ಣಿಗೆ ಬಿದ್ದ ಸಾಧಕರು, ಸಿದ್ಧರು, ಪರವೂರ ಯಾತ್ರಿಕರು ಮುಂತಾದ ಎಲ್ಲರನ್ನೂ ಕೇಳುವೆ, " ನಿಮಗೆ ಶರಣರ ಬಗ್ಗೆ ತಿಳಿದಿದೆಯೆ ? ಅವರ ತತ್ತ್ವ, ಜೀವನ, ಸಾಧನೆ ಈ ಬಗ್ಗೆ ದಯವಿಟ್ಟು ವಿವರಿಸಿ ಎಂದು.

7. ನಿಜಕ್ಕೂ ನಮ್ಮ ಶರಣರು ಬಲು ಮೃದು ಹೃದಯದವರು, ತಾಯಿಯ ಕರುಳಿನವರು. ಆದರೆ ನನ್ನ ವಿಷಯಕ್ಕೆ ಯಾಕೆ ಅವರಿಗಿನ್ನೂ ಮರುಕ ಬಂದಿಲ್ಲವೋ ತಿಳಿಯದಂತಾಗಿದೆ, ಉದಯ-ಅಸ್ತಮಾನ, ಹಗಲು-ರಾತ್ರಿಗಳಲ್ಲೆಲ್ಲ ನಾನು ಕುದಿದು, ಕೋಟಲೆಗೊಂಡು ಮಿಡುಕುತ್ತಿರುವೆ. ಇಷ್ಟಾದರೂ ಆ ಶರಣರು ಹೃದಯ ಕರಗಿ ಓಗೊಡಲೊಲ್ಲರು.

8. ಮನಸ್ಸಿನಲ್ಲಿ ಅಳಲುತ್ತಿರುವೆ : ಬಾರದಿರುವುದರಿಂದ ಬಳಲುತ್ತಿರುವೆ. ನೆನೆದೂ ನೆನೆದೂ ಸೋತು ನಿಶ್ಯಕ್ತಳಾಗುವೆ. ತ್ರೈಮಲಗಳನ್ನು, ಭವಬಂಧನವನ್ನೂ ಸರಿಸಬಲ್ಲ ಶರಣರ ಅನುಗ್ರಹ ಪಡೆವಾಸೆಯಿಂದ ಹಂಬಲಿಸುತ್ತಿರುವೆ. ಹೋಗಲೀ ಅವರು ಕನಸಿನಲ್ಲಾದರೂ ಬಂದು ಸಂತೈಸಬಾರದೆ ?

9. ಆಯುಷ್ಯ ಕಳೆಯುತ್ತಿದೆ, ಹಗಲು-ರಾತ್ರಿ ಸರಿಯುತ್ತಿವೆ; ಅಮವಾಸ್ಯೆ ಹೋಯಿತು ಹುಣ್ಣಿಮೆ ಬರುತ್ತಿದೆ. ಶರಣರ ಕೃಪಾಕಟಾಕ್ಷ ಹರಿದು ನನ್ನ ಬದುಕು ಸಾರ್ಥಕವಾಗುವುದೆಂದು ? ಆಯುಷ್ಯದ ವ್ಯರ್ಥತೆಯನ್ನರಿದು ನೊಂದು ಸುಯ್ಗರೆಯುತ್ತಿರುವೆ, ಬೆಂದು ಬೆಂಡಾಗುತ್ತಿರುವೆ. ಹೀಗಿರುವಾಗ ಕರುಣಾಳುಗಳಾದ ನೀವು ಕಠಿಣ ಮನಸ್ಸಿನಿಂದ ಗಮನಿಸದೆ ಇರುವುದು ಚೆನ್ನಾಗಿ ಕಾಣುವುದೆ ?

10. ಎಲ್ಲಿಯಾದರೂ ಹೊರಗೆ ಗಿರುಕ್ ಎಂದು ತರಗೆಲೆ ಸರಿದಾಡಿದರೂ ಉತ್ಕಟತೆಯಿಂದ ಹೊರಗೆ ಹೋಗಿ ನೋಡುವೆ, ಆಲಿಸುವೆ. ಶರಣರಾರೂ ಕಾಣದಾಗ ಮನಸ್ಸಿನಲ್ಲಿ ನಿಟ್ಟುಸಿರುಡುವೆ. ನಾನು ಶರಣ ಪಥದವನಲ್ಲ ಎಂದು ಪರರ ಶಿಶುವೆಂದು ತಪ್ಪು ತಿಳಿದು ಶರಣರು ನನ್ನನ್ನು ಮರೆತುಬಿಟ್ಟರೋ, ಕೈಬಿಟ್ಟರೋ ಎಂದು ಹೆದರುತ್ತಿರುವೆ. ನನ್ನ ಮನಸ್ಸೀಗ ಕುದಿವ ಬಾಂಡಲೆಯಾಗಿದೆ. ಸುಖದುಃಖಗಳನ್ನು

ಯಾರ ಮುಂದಾದರೂ ತೋಡಿಕೊಳ್ಳಬೇಕಾಗಿದೆ. ಲೌಕಿಕರ ಮುಂದೆ ಹೇಳಿದರೆ, ಅವರಿಗೆ ನಮ್ಮ ಚಿಂತೆಯು ಬೆಗೆ ಅರ್ಥವಾಗದೆ ನಕ್ಕು ಬಿಡುವರು, ಅಪಹಾಸ್ಯ ಮಾಡುವರು, ಹುಚ್ಚರೆನ್ನುವರು. ನನ್ನದೇ ಬಗೆಯ ಚಿಂತನ ಶೀಲತೆ, ಹುಚ್ಚು ಇರುವ ಶರಣರ 13 ಮುಂದೆ ತೋಡಿಕೊಂಡರೆ ಅವರು ಸಂತೈಸುವರು. ಮುಂದಿನ ಮಾರ್ಗ ತೋರಿಸುವರು.

ಲೌಕಿಕ ಜನರು ಕಾಡಲಿ, ಅಪಹಾಸ್ಯ ಮಾಡಲಿ. ನನ್ನ ಗಂಡನಾದರೂ ನನ್ನ ಕಡೆಗೆ ಇರಬಾರದೆ ? ನನ್ನ ಅರಸು ಷಡಕ್ಷರಿಯೆಂಬ ವರನು ನನ್ನ ವಿವಿಧ ಬಗೆಯಲ್ಲಿ ಕಾಡುತ್ತಿರುವನು. ಅದನ್ನೆಲ್ಲ ನನ್ನ ತವರಿನವರಿಗೆ (ಶರಣರಿಗೆ) ಹೇಳಿ ಪರಿಹಾರವನ್ನು ಕೇಳಿಕೊಳ್ಳುವೆ. [ನನ್ನರಸನಿಗೆ ತಕ್ಕ ಶಾಸ್ತಿ ಮಾಡಿಸುವೆ.]

ಮುಪ್ಪಿನ ಷಡಕ್ಷರಿಯ ಹೆಂಗರುಳಿನ ಭಾವನಾವಿಲಾಸವನ್ನು ಕಂಡರೆ ಅಚ್ಚರಿ ಎನಿಸುವುದು. ಈ ಹೋಲಿಕೆಯ ಕೆಲವು ವಚನಗಳು ಹೀಗಿವೆ :

೧. ಹೊಲಬುಗೆಟ್ಟೆನು ಬಟ್ಟೆಯ ತೋರಯ್ಯಾ.
ಹುಯ್ಯಲಿಟ್ಟೆನು ಗಣಂಗಳು ಕೇಳಿರಯ್ಯಾ :
ಕೂಡಲಸಂಗಮದೇವಯ್ಯನೆನ್ನ ಕಾಡಿಹನಯ್ಯಾ ! (ಬಸವ. ೬೩)

ಇಲ್ಲಿ ದೇವರ ಮೇಲೆ ದೂರುಕೊಡುವರು. ಶ ರ ಣ ರ ಮುಂದೆ. ಶರಣರ ಬರವಿಗಾಗಿ ಬಸವಣ್ಣನವರು ಹಂಬಲಿಸುತ್ತಿದ್ದ ಪರಿ ಹೀಗಿದೆ,

೨. ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆರೆದು
ಬತ್ತಿಯನ್ನಿಕ್ಕಿ ಬರವ ಹಾರುತ್ತಿದ್ದೆನೆಲೆಗವ್ವಾ !
ತರಗೆಲೆ ಗಿರುಕೆಂದಡೆ ಹೊರಗನಾಲಿಸುವೆ.
ಅಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲೆಗವ್ವಾ !
ಕೂಡಲ ಸಂಗನ ಶರಣರು ಬಂದು, ಬಾಗಿಲ ಮುಂದೆ ನಿಂದು
ಶಿವಾ ಎಂದಡೆ ಸಂತೋಷಬಟ್ಟೆನೆಲೆಗವ್ವಾ !

೩. ಕೂಪವರಿಗೆ ಹೇಳುವೆನು ಕುಳಸ್ಥಳಂಗಳನೆಲ್ಲವ
ಕೂರದವರಿಗೆ ಹೇಳಿ ನಾನೇವೆ ಶಿವನೆ ?
ಕರಲಭೂಮಿಯಲ್ಲಿ ಕರೆವ ವೃಷ್ಟಿಯ ತೆರನಂತೆ
ಅವರೆತ್ತ ಬಲ್ಲರೋ ಎನ್ನ ಸುಖ-ದುಃಖವ ?
ಅಂಗತವಿಲ್ಲದ ಸಂಗವು ಅಳಲಿಲ್ಲದ ಹುಯ್ಯಲಂತೆ !
ಇದು ಕಾರಣ, ಕೂಡಲ ಸಂಗಮದೇವಾ,
ನಿಮ್ಮ ಶರಣರಿಗಲ್ಲದೆ ಬಾಯಿದೆರೆಯೆನು.

ಸಮಾನ ಅಭಿರುಚಿ, ಒಂದೇ ಧ್ಯೇಯ ಹೊಂದಿ ನಡೆದ, ನಡೆವ ಸಹ ಪಥಿಕರಾದ ಶರಣರು ಅತಿ ಆತ್ಮೀಯರು ಮತ್ತು ಹಿತೈಷಿಗಳು. ಅವರ ಮುಂದಷ್ಟೇ ಮುಪ್ಪಿನ ಷಡಕ್ಷರಿಗಳಂತಹ ಶಿವವಧುಗಳು, ಶರಣಸತಿಯರು ತಮ್ಮ ಅಂತರಂಗ ತೋಡಿಕೊಳ್ಳ ಬಲ್ಲರು. ಆ ತುಡಿತವೇ ಈ ಪದ್ಯದಲ್ಲಿ ಸೊಗಸಾಗಿ ಹರಿದಿದೆ.

'ಕಲ್ಯಾಣ ಕಿರಣ' ದ ಓದುಗರ ಗಮನಕ್ಕೆ

ಮಾನ್ಯರೇ,

೧. "ಕಲ್ಯಾಣ ಕಿರಣ" ಮಾಸಪತ್ರಿಕೆಯು ಸ್ವತಂತ್ರವಾದ ಮುದ್ರಣಾಲಯವನ್ನು ಹೊಂದಿದ್ದು, ಮುದ್ರಣಾಲಯವು ಬಸವ ಗಂಗೋತ್ರಿಯಲ್ಲಿದೆ. ಹೀಗಾಗಿ ಕಲ್ಯಾಣ-ಕಿರಣಕ್ಕೆ ಸಂಬಂಧಿಸಿದ ಎಲ್ಲ ವ್ಯವಹಾರಗಳೂ ಬಸವ ಗಂಗೋತ್ರಿಯ ಆವರಣದಲ್ಲೇ ನಡೆಯುತ್ತವೆ. ಆದ್ದರಿಂದ ಕಲ್ಯಾಣ ಕಿರಣಕ್ಕಾಗಿ ಹಣ ಕಳುಹಿಸುವವರು ಪುಸ್ತಕಕ್ಕಾಗಿ ಹಣ ಕಳುಹಿಸುವವರು ಬಸವ ಗಂಗೋತ್ರಿಯ ವಿಳಾಸಕ್ಕೆ ಕಳಿಸಬೇಕು. ಬೇರೆ ಊರಿನಿಂದ ಅಂಚೆಯಲ್ಲಿ ವ್ಯವಹರಿಸುವವರೆಲ್ಲ ಇದನ್ನು ಗಮನಿಸಬೇಕು.

೨. ನೇರವಾಗಿ ಬಂದು ಹಣ ಕಟ್ಟುವವರು, ಪುಸ್ತಕ ಕೊಳ್ಳುವವರು, ರಾಜಾಜಿನಗರದಲ್ಲಿರುವ ಬಸವ ಮಂಟಪಕ್ಕೆ ಬಂದು ಪತ್ರಿಕೆಯ ಚಂದಾದಾರರಾಗಬಹುದು; ಕಾಣಿಕೆ ಸಲ್ಲಿಸಬಹುದು; ಪುಸ್ತಕಗಳನ್ನು ಖರೀದಿಸಬಹುದು.

೩. ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಎಲ್ಲ ಪ್ರಕಟಣೆಗಳು ಬೆಂಗಳೂರಿನ ಬಸವ ಮಂಟಪ, ಕುಂಬಳಗೋಡು ಬಳಿಯಿರುವ ಬಸವ ಗಂಗೋತ್ರಿ, ಧಾರವಾಡದ ಅಕ್ಕಮಹಾದೇವಿ ಆಶ್ರಮ, ಹುಬ್ಬಳ್ಳಿಯ ಎಂ.ಟಿ.ಎಸ್. ರೇಲ್ವೆ ಕಾಲೋನಿಯಲ್ಲಿರುವ ಕೆ. ಡಿ. ಪರಮಾದಿಯವರ ಮನೆ – ಈ ಎಲ್ಲ ಸ್ಥಳಗಳಲ್ಲಿ ದೊರೆಯುತ್ತವೆ.

೪. ಸಂಸ್ಥೆಗೆ ಹಣ ಕಳಿಸುವಾಗ ಯಾವ ಉದ್ದೇಶದಿಂದ ಕಳಿಸುವರೋ ಅದನ್ನು ವಿವರವಾಗಿ ಬರೆಯಬೇಕು.

ಕಾಣಿಕೆಯಾಗಿದ್ದರೆ, 'ವಿಶ್ವಕಲ್ಯಾಣ ಮಿಷನ್' ಎಂದು, ಶಿಬಿರದ ಶುಲ್ಕವಾಗಿದ್ದರೆ 'ಬಸವ ತತ್ತ್ವ ಪರಿಷತ್; ಎಂದು, ಮಾಸಪತ್ರಿಕೆಯ ಚಂದಾ ಆಗಿದ್ದರೆ 'ಕಲ್ಯಾಣ ಕಿರಣ' ಎಂದು ಎಂ. ಓ. ಫಾರ್ಮ್, ಪತ್ರಗಳಲ್ಲಿ ಬರೆದು ಕುಂಬಳಗೋಡಿನ ವಿಳಾಸಕ್ಕೆ ಕಳಿಸಬೇಕು.

ವಿ. ಸೂ. : ಯಾವುದೇ ವ್ಯಕ್ತಿಯ ಹೆಸರನ್ನು ಬರೆಯಬಾರದು.

ಕಲ್ಯಾಣ ಕಿರಣ ಕಾರ್ಯಾಲಯ
"ಬಸವ ಗಂಗೋತ್ರಿ"
ಕುಂಬಳಗೋಡು-೫೬೦೦೭೪
ಬೆಂಗಳೂರು ದಕ್ಷಿಣ ತಾಲ್ಲೂಕು : : ಬೆಂಗಳೂರು ಜಿಲ್ಲೆ.

ಬಸವ ಲಿಂಗೈಕ್ಯ ದಿನಾಚರಣೆ

ಕಲ್ಯಾಣ ಕಿರಣದ ಓದುಗರು, ಬಸವಣ್ಣನವರಲ್ಲಿ ಶ್ರದ್ಧೆಯಿಟ್ಟ ಅನೇಕರು ಬಸವ ಪಂಚಮಿಯನ್ನು ಬಹು ಮಾರ್ಮಿಕವಾಗಿ ಆಚರಿಸಿದ್ದು, ಅಂಥ ಕೆಲವು ವರದಿಗಳನ್ನು ಇಲ್ಲಿ ಕೊಡಲಾಗುತ್ತಿದೆ.

೧. ಹುಬ್ಬಳ್ಳಿ

ಶ್ರೀ ಬಸವೇಶ್ವರ ವ್ರತವನ್ನು ಐದು ದಿವಸಗಳ ಕಾಲ ಮಾಡಿ, ಶ್ರೀ ಬಸವ ಪಂಚಮಿಯಂದು ಮುಕ್ತಾಯ ಮಾಡಿದೆವು. ಪ್ರತಿವಾರ ಪ್ರಾರ್ಥನೆಗೆ ಬರುವ ಜನರೆಲ್ಲ ಪೂಜೆಗೆ ಬಂದರು. ಅಲ್ಲದೆ ಬಸವ ಪಂಚಮಿ ನಿಮಿತ್ತ ಬೆಳಿಗ್ಗೆ ೧೦ ಕ್ಕೆ ಶ್ರೀ ಬಸವ ನಗರ ಸಹಕಾರಿ ಗೃಹ ನಿರ್ಮಾಣ ಸಂಘ ನಿಯಮಿತ, ಹುಬ್ಬಳ್ಳಿ ಇದರ ನಿವೇಶನದಲ್ಲಿ ಮಂಗಳವಾರ ದಿ॥ ೨೦-೮-೮೫ ರಂದು ಶ್ರೀ ಬಸವೇಶ್ವರ ಪೂಜೆ ಏರ್ಪಡಿಸಿದುದೇ ಅಲ್ಲದೆ ಶರಣೆ ಸಂಗಮ್ಮ ಕರವೀರಶೆಟ್ಟರ ಅವರಿಂದ ಷಟಸ್ಥಲ ಧ್ವಜಾರೋಹಣ ವಾಯಿತು. ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಮೇಯರರಾದ ಶರಣ ಶಿವಪ್ಪ ಕಲ್ಲಪ್ಪ ಕೋಕಾಟಿ ಅವರು "ಶ್ರೀ ಬಸವ ಮಂಟಪ" ಕ್ಕೆ ಅಡಿಗಲ್ಲನ್ನು ಇಟ್ಟರು, ಮನೆಯಲ್ಲಿ ಸಂಜೆ ವಿಶೇಷವಾಗಿ ಬಸವ ಪಂಚಮಿ ಆಚರಿಸಲಾಯಿತು. ನಗರದ ಬೇರೆ ಬೇರೆ ಭಾಗಗಳಿಂದ ಸದ್ಭಕ್ತರು ಭಾಗವಹಿಸಿದರು. ಶೋಭಾ ಪರಮಾದಿಯವರು ವಚನ ಗಳನ್ನೂ, ಗೀತೆಗಳನ್ನೂ ಹಾಡಿದರು. ನಾನು ಕಥಾ ಪಠಣ ಮಾಡಿದೆ. ಸಾಮೂಹಿಕವಾಗಿ ಎಲ್ಲರೂ ಶ್ರೀ ಬಸವಲಿಂಗ ಮಂತ್ರಪಠಣ ಮಾಡಿದೆವು. ಕಲ್ಯಾಣ ಕಿರಣ ಓದಿದ ಅನೇಕರು ಅದರಲ್ಲಿ ಸೂಚಿತವಾದಂತೆ ತಮ್ಮ ತಮ್ಮ ಮನೆಗಳಲ್ಲಿ ಬಸವ ಪಂಚಮಿ ಆಚರಿಸಿದರು. ಪ್ರಥಮ ಬಾರಿಯ ಈ ಆಚರಣೆ ಎಲ್ಲರಿಗೂ ತುಂಬಾ ಸಂತೋಷ ಕೊಟ್ಟಿತು.

— **ಕೆ ಡಿ. ಪರಮಾದಿ,** ಎಂ.ಟಿ.ಎಸ್. ರೇಲ್ವೆ ಕಾಲನಿ, ಹುಬ್ಬಳ್ಳಿ.

೨. ಗಾಮನ ಗಟ್ಟಿ :

ತಮ್ಮ ಕಲ್ಯಾಣ ಕಿರಣದಲ್ಲಿ ಸೂಚಿಸಿದಂತೆ ಬಸವಣ್ಣನವರ ಲಿಂಗೈಕ್ಯ ದಿನವನ್ನು ನಾವೆಲ್ಲರೂ ಆಚರಿಸಿದೆವು. ಸಾಮೂಹಿಕವಾಗಿ ನಿಯಮಗಳ ಪ್ರಕಾರ ಚಾಚೂ ತಪ್ಪದಂತೆ ವಿಜೃಂಭಣೆಯಿಂದ ಆಚರಿಸಿದೆವು. ಇದು ನಮಗೆ ಹೊಸದಾಗಿ ಆಗಿರುವುದರಿಂದ ಬಹಳಷ್ಟು ಆನಂದವಾಯಿತು.

— **ಪರಪ್ಪ ಕ. ಅವರಾದಿ,** ಗಾಮನಗಟ್ಟಿ.

೩. ಬೀದರ :

ತಾವು ತಿಳಿಸಿದಂತೆ ಬಸವ ಮಂಟಪದಲ್ಲಿ ಅತ್ಯಂತ ಉತ್ಸಾಹದಿಂದ, ವಿಜೃಂಭಣೆಯಿಂದ "ಬಸವ ಲಿಂಗೈಕ್ಯ ದಿನಾಚರಣೆ" ಆಚರಿಸಿದ್ದೇವೆ. ಅಲ್ಲದೆ ಸುಮಾರು ೨೫ ಹಳ್ಳಿಗಳಲ್ಲಿ ಸಾಮೂಹಿಕವಾಗಿ ಆಚರಿಸುವ ಏರ್ಪಾಟು ಮಾಡಲಾಗಿತ್ತು. ಬೀದರ ನಗರದಲ್ಲಿ ಮುಖ್ಯ ಬಸವ ಮಂಟಪ, ಹಾರೂರಗೇರಿ ಬಸವ ಮಂಟಪ, ಮಂಗಲಪೇಟೆಯ ಶ್ರೀ ಮಡಿವಾಳೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆಗಳೊಡನೆ ಬಸವ ಪಂಚಮಿ ಆಚರಿಸಲಾಯಿತು. ಬೀದರ ಸುತ್ತಮುತ್ತಲಿನ ಆಂಧ್ರಪ್ರದೇಶದ ಗಡಿನಾಡಿನಲ್ಲಿ ಬಸವ ಪಂಚಮಿ ಆಚರಿಸಲಾಯಿತು. ಸಾಮೂಹಿಕವಾಗಿ ಮಾತ್ರವಲ್ಲದೆ ಮನೆ ಮನೆಗಳಲ್ಲಿಯೂ ಶ್ರಾವಣ ಪ್ರತಿಪದೆಯಿಂದ ಪಂಚಮಿವರೆಗೆ ೫ ದಿವಸ ಕಾಲ ಶ್ರೀ ಬಸವೇಶ್ವರ ಪೂಜಾ ವ್ರತ ಮಾಡಿ, ಬಸವ ಪಂಚಮಿಯಂದು ಮುಕ್ತಾಯ ಮಾಡಲಾಯಿತು.

— **ರಾಜಕುಮಾರ ಪಾಟೀಲ,** ಅಧ್ಯಕ್ಷರು, ಬಸವದಳ, ಬೀದರ.

೪. ತಾಂಡೂರು :

ಆಂಧ್ರಪ್ರದೇಶದ ತಾಂಡೂರಿನ ಶ್ರೀ ಭಾವಿಗಿ ಭದ್ರೇಶ್ವರ ದೇವಾಲಯದಲ್ಲಿ ವಿಶ್ವಕಲ್ಯಾಣ ಮಿಷನ್ನಿನ ಪೂಜ್ಯ ಮಾತೆ ಗಂಗಾದೇವಿಯವರು ೧೬-೮-೮೫ ರಂದು ಶ್ರಾವಣ ಮಾಸದ ಪ್ರವಚನ ಆರಂಭಿಸಿದರು. ಅಂದು ಬೆಳಿಗ್ಗೆ ೯ ಕ್ಕೆ ಶ್ರೀ ಬಸವೇಶ್ವರ ಪೂಜಾರಂಭ. ಚೇರ್ಮನ್ ವೀರಭದ್ರಪ್ಪನವರಿಂದ ಹಿಡಿದು ದೇವಾಲಯದ ಸಮಸ್ತ ಆಡಳಿತವರ್ಗ ಉತ್ಸುಕತೆಯಿಂದ ಭಾಗವಹಿಸಿದರು. ತಾಂಡೂರಿನ ಸದ್ಭಕ್ತರು ಐದು ದಿವಸಗಳ ಪೂಜೆಯಲ್ಲಿ ಪಾಲ್ಗೊಂಡುದೇ ಅಲ್ಲದೆ ಬಸವ ಪಂಚಮಿಯಂದು ವಿಶೇಷವಾಗಿ ಭಾಗಿಗಳಾದರು. ಪ್ರವಚನವು ಶ್ರಾವಣಮಾಸ ಪೂರ್ತಿ ನಡೆಯಲಿದೆ.

— **ಸೋದರಿ ಲೋಹಿತಾದೇವಿ.** ಕ್ಯಾಂಪ್, ತಾಂಡೂರು.

೫. ರಾಜಾಜಿನಗರದ ಬಸವ ಮಂಟಪ ದಲ್ಲಿ ಸೋದರಿಯರಾದ ಜಯಮ್ಮ, ಮಂಗಳಾದೇವಿ, ನೀಲಾಂಬಿಕೆ ಅವರು ೫ ದಿವಸಗಳ ವ್ರತ ಸ್ವೀಕರಿಸಿ, ಪೂಜೆ ನೆರವೇರಿಸಿದರು. ಬಸವ ಮಂಟಪದ ಸದ್ಭಕ್ತರೆಲ್ಲ ಪೂಜೆಯಲ್ಲಿ ಭಾಗಿಗಳಾಗಿ ಪ್ರಸಾದ ಸ್ವೀಕರಿಸಿದರು.

೬. ಕುಂಬಳಗೋಡಿನ ಬಸವ ಗಂಗೋತ್ರಿ ಯಲ್ಲಿ ಸೋದರಿ ಶೋಭಾದೇವಿ, ಸೋದರಿ ನಾಗರತ್ನಮ್ಮ ಐದು ದಿವಸಗಳ ವ್ರತ ಸ್ವೀಕರಿಸಿ, ಪೂಜೆ ನೆರವೇರಿಸಿದರು. ಬಸವ ಪಂಚಮಿಯಂದು ವಿಶೇಷ ಪೂಜೆ ನೆರವೇರಿತು.

೭. ಪೂಜ್ಯರಿಗೆ ಪ್ರಣಾಮಗಳು.

ಬಸವ ಕೃಪೆಯಿಂದ ಪುಣೆಯ ಉರುಳಿ ಕಾಂಚನದಲ್ಲಿ ನನಗೆ ತರಬೇತಿ ನೌಕರಿಯಾಯಿತು. ಕಲ್ಯಾಣ ಕಿರಣ ಕೈಸೇರಿತು. ಕರ್ನಾಟಕ ಮತ್ತು ಮಹಾರಾಷ್ಟ್ರದ ವಿವಿಧ ಭಾಗಗಳಿಂದ ತರಬೇತಿಗಾಗಿ ಅನೇಕರು ಬಂದಿದ್ದರು. ೧೯-೮-೮೫ ರಂದು "ಕ್ರಾಂತಿಯೋಗಿ ಬಸವಣ್ಣ"ದ ಹಾಡು ಟಿ. ವಿ. ಯಲ್ಲಿ ಬಂದಾಗ ನಾವು ಹರ್ಷಿಸಿದೆವು. ೨೦-೮-೮೫ರಂದು ಎಲ್ಲರೂ ಬಸವ ಲಿಂಗೈಕ್ಯ ದಿನಾಚರಣೆಯನ್ನು ಪ್ರಾರ್ಥನೆ-ಪಾರಾಯಣಗಳ ಮೂಲಕ ಚೆನ್ನಾಗಿ ಆಚರಿಸಿ, ಅಪ್ಪ ಬಸವಣ್ಣನಿಗೆ ಕೃತಜ್ಞತೆ ಸಲ್ಲಿಸಿದೆವು.

— **ಬಿ. ಜಿ. ದೊಡ್ಡಮನಿ,** ಟ್ರೇನೀ ಆಫೀಸರ, **ಉರುಳಿ ಕಾಂಚನ,** ಪುಣೆ.

೮. **ಬಿಮಳಖೇಡ : ಶ್ರೀಮತಿ. ಇಂದುಮತಿ. ವೀರಣ್ಣಾ ಬಂಡಿ.**

ನಾನೊಬ್ಬ ಪ್ರಾಥಮಿಕ ಶಾಲಾ ಶಿಕ್ಷಕಿ. ಕಲ್ಯಾಣ ಕಿರಣದ ಆಜೀವ ಸದಸ್ಯೆ. ಶ್ರಾವಣ ಶುದ್ಧ ಪಂಚಮಿಯಂದು ತಮ್ಮ ಸೂಚನೆ ಪ್ರಕಾರ ಮಾಡಿದೆವು. ಸಾಮೂಹಿಕವಾಗಿ ಎಲ್ಲ ಜಾತಿ ಪಂಥದ ಅಕ್ಕ ತಂಗಿಯರನ್ನೆಲ್ಲ ಸೇರಿಸಿ ಪಂಚಮಿ ಆಚರಿಸಿದೆವು. ಅದು ಮನಸ್ಸಿಗೆ ತುಂಬಾ ಆನಂದ ಕೊಟ್ಟಿತು.

[**ವಿ. ಸೂ** :— ಇನ್ನೂ ಅನೇಕ ವರದಿಗಳು ಬಂದಿದ್ದು, ಸ್ಥಳಾಭಾವದಿಂದ ಪ್ರಕಟಿಸಲಾಗುತ್ತಿಲ್ಲ. ಇದೇ ರೀತಿ ವೈಯಕ್ತಿಕವಾಗಿ, ಸಾಮೂಹಿಕವಾಗಿ ಆಚರಿಸುವಿರಾಗಿ ನಂಬಿ, ಶ್ರೀ ಗುರು ಬಸವೇಶ್ವರರ ಕೃಪೆಗೆ ಪಾತ್ರರಾಗಲೆಂದು ಹಾರೈಸುವೆವು.]

ಸಮಸ್ಯೆ—ಸಮಾಧಾನ ಕುರಿತು

ಬಹಳಷ್ಟು ಪ್ರಶ್ನೆಗಳು, ವೈವಿಧ್ಯಮಯವಾಗಿ ಬಂದಿವೆ. ಸೆಪ್ಟಂಬರ್ ಸಂಚಿಕೆ ಸೀಮಿತ ಪುಟಗಳಿಂದ ಬರುತ್ತಿರುವ ಕಾರಣ, ಪ್ರಶ್ನೋತ್ತರ ವಿಭಾಗ ಇಲ್ಲ. ಅಕ್ಟೋಬರ್ ವಿಶೇಷ ಸಂಚಿಕೆಯಲ್ಲಿ, ಬರಲಿದೆ. ಕೇಳುಗರು ಇದನ್ನು ಗಮನಿಸಬೇಕು.

— ಸಂಪಾದಕರು

ಸೆಪ್ಟಂಬರ್ ಸಂಚಿಕೆ ಕುರಿತು.

ಹಿಂದಿನ ಸಂಚಿಕೆಯಲ್ಲಿ ಸೆಪ್ಟಂಬರ್ ಕಲ್ಯಾಣ ಕಿರಣ ಹೊರಬರುವುದಿಲ್ಲವಾಗಿ ತಿಳಿಸಲಾಗಿತ್ತು. ಅನಿರೀಕ್ಷಿತವಾಗಿ 16 ಪುಟಗಳೊಡನೆ ಹೊರಬರುತ್ತಿರುವುದು ಸದ್ಗುರುಗಳ ವರ್ಧಂತಿ, ಶಿಬಿರದ ಕಾರ್ಯಕ್ರಮ, ಮತ್ತು ಮುಕ್ತಾಯ ಸಮಾರಂಭಕ್ಕೆ ಮುಖ್ಯಮಂತ್ರಿಗಳ ಆಗಮನ ಕುರಿತು ಸದ್ಭಕ್ತರಿಗೆ ತಿಳಿಸಲಿಕ್ಕಾಗಿ. ಇದನ್ನೇ ಪ್ರತ್ಯಕ್ಷ ಆಮಂತ್ರಣ ಪತ್ರಿಕೆಯೆಂದು ಭಾವಿಸಿ ಆಗಮಿಸಬೇಕಾಗಿ ಕೋರುತ್ತೇವೆ.

— **ಪೂಜ್ಯ ಶ್ರೀ ಮಾತಾಜಿ.**

ಹಲವು ಜಾತಿಗಳನ್ನೋಡಿಸಿರಿ.
ಮನುಕುಲ ಒಂದೆಂಬ ನೀತಿ ತಿಳಿಸಿರಿ.
ಮೇಲು ಕೀಳೆಂಬ ಭಾವ ತೊಲಗಿಸಿರಿ.
ಬಸವ ತತ್ತ್ವವ ಎಲ್ಲೆಲ್ಲೂ ಸ್ಥಾಪಿಸಿರಿ.

—**ಎನ್. ಜಿ. ಪಾಟೀಲ.**

ಬಸವ ತತ್ತ್ವ ಪರಿಷತ್ತು

ಅಕ್ಟೋಬರ್ ತಿಂಗಳಲ್ಲಿ ಭಕ್ತಿ ಪಕ್ಷದ ಸಮಾವೇಶ.

❖ ವಿಶ್ವ ಗುರು ಬಸವಣ್ಣನವರ ಭಕ್ತಿ ಪಕ್ಷದ ಬಳ್ಳಿಯು ಎಲ್ಲೆಡೆ ಹಬ್ಬಿದ್ದು ಆಸಕ್ತರು, ಅಭಿಮಾನಿಗಳು, ಸಾಧಕರು, ಮುಮುಕ್ಷುಗಳು ಒಂದೆಡೆ ಸೇರಲೋಸುಗ ಭಕ್ತಿ ಪಕ್ಷದ ನಾಲ್ಕನೆಯ ಸಮಾವೇಶವನ್ನು ಅಕ್ಟೋಬರ್ ತಿಂಗಳಲ್ಲಿ ಏರ್ಪಡಿಸಲಾಗಿದೆ.

❖ 1985 ಅಕ್ಟೋಬರ್ 2 ನೆಯ ತಾರೀಖು ಬುಧವಾರದಿಂದ ಪೂರ್ವಭಾವಿಯಾಗಿ ತತ್ತ್ವ ತರಬೇತಿ ಶಿಬಿರ ಪ್ರಾರಂಭವಾಗಲಿದೆ. 2-10-1985 ರಿಂದ 13-10-1985 ರ ವರೆಗೆ 12 ದಿವಸಗಳ ಕಾಲ ನಡೆಯಲಿದೆ. ಶನಿವಾರ ದಿನಾಂಕ 12-10-1985 ಮತ್ತು ಭಾನುವಾರ ದಿ. 13-10-1985 ರಂದು ವಿಶೇಷಕಾರ್ಯಕ್ರಮಗಳು ನಡೆಯಲಿದ್ದು, ಭಾನುವಾರ ಮಂಗಲಸಮಾರಂಭವಿದೆ.

ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲೆ 21 ಕಿ. ಮೀ. ದೂರದಲ್ಲಿರುವ ಕುಂಬಳಗೋಡು ಗ್ರಾಮದ ಸನಿಹದಲ್ಲಿರುವ "ಬಸವ ಗಂಗೋತ್ರಿ" ಯಲ್ಲಿ ಈ ತತ್ತ್ವ ತರಬೇತಿ ಶಿಬಿರ ಮತ್ತು ಭಕ್ತಿ ಪಕ್ಷದ ಸಮ್ಮೇಳನ ನಡೆಯುವುದು. ಇದರ ಮುಕ್ತಾಯ ಸಮಾರಂಭವು 13-10-1985 ರಂದು ಬೆಳಿಗ್ಗೆ 9-30ಕ್ಕೆ ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ನೆರವೇರಲಿದೆ. ಮುಖ್ಯ ಅತಿಥಿಗಳಾಗಿ ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಆಗಮಿಸಲಿದ್ದಾರೆ.

❖ ಹನ್ನೆರಡು ದಿವಸಗಳ ತರಬೇತಿ ಬಯಸುವವರು ಶಿಬಿರ ಶುಲ್ಕವೆಂದು 100-00 (ಒಂದು ನೂರು) ರೂಪಾಯಿಗಳನ್ನೂ, ಕೇವಲ ಎರಡೇ ದಿವಸಗಳ ಭಕ್ತಿಪಕ್ಷದ ಸಮ್ಮೇಳನದಲ್ಲಿ ಭಾಗವಹಿಸುವವರು 20 ರೂಪಾಯಿಗಳನ್ನು ಶಿಬಿರ ಶುಲ್ಕವೆಂದು ಕಳಿಸಬೇಕು. ಎಂ. ಓ. ಬ್ಯಾಂಕ ಡಿ. ಡಿ. ಮುಖಾಂತರ ಹಣ ಕಳಿಸಬಹುದು.

❖ "ಬಸವ ತತ್ತ್ವ ಪರಿಷತ್'' ಎಂದೇ ಡಿ. ಡಿ. ತೆಗಸಬೇಕು.

ವಿಶೇಷ ಸೂಚನೆ:— ಆರ್ಥಿಕ ಅನಾನುಕೂಲತೆಯಿಂದಾಗಿ ಶುಲ್ಕ ಕೊಡಲು ಅಶಕ್ತರಾದವರು, ಪೂರ್ವಭಾವಿಯಾಗಿ ಪತ್ರ ಬರೆದು ಒಪ್ಪಿಗೆ ಪಡೆದುಕೊಳ್ಳಬೇಕು. ಶಿಬಿರಾರ್ಥಿಗಳಿಗೆ ಬ್ಯಾಡ್‌ಜಸ್ ಕಳಿಸಲಾಗುವದು. ಅದನ್ನು ಪಡೆದುಕೊಂಡೇ ಬರಬೇಕು.

❖ ಸ್ವಯಂ ಪ್ರೇರಣೆಯಿಂದ ಕಾಣಿಕೆ ಕಳಿಸುವವರೂ ಕಳಿಸಬಹುದು.

❖ ಬಸವ ತತ್ತ್ವ ಪರಿಷತ್‌ನ ವಿಶೇಷ ಸಂಚಿಕೆಯಾಗಿ ಕಲ್ಯಾಣ ಕಿರಣದ ವಿಶೇಷಾಂಕ "**ಬಸವ ಕಿರಣ**" ಹೊರಡಿಸಲಿದ್ದು, ಅದಕ್ಕೆ ಜಾಹಿರಾತು ಕೊಡುವವರೂ ಕೊಡಬಹುದು. ವಿವರಗಳು ಪ್ರತ್ಯೇಕವಾಗಿವೆ. ಗಮನಿಸಿರಿ.

❖ ತತ್ತ್ವ ತರಬೇತಿ ಶಿಬಿರದಲ್ಲಿ ಕೆಳಕಂಡ ತರಬೇತಿ ಕೊಡಲಾಗುವದು.

- ಅ) ಯೋಗಾಸನ.
- ಆ) ಪೂಜೆ-ಧ್ಯಾನ.
- ಇ) ಪ್ರವಚನ.
- ಈ) ಸಾಮೂಹಿಕ ಪ್ರಾರ್ಥನೆ.
- ಉ) ಬಸವೇಶ್ವರ ಪೂಜಾ ವ್ರತ.
- ಊ) ನಾಮಕರಣ, ಲಗ್ನವಿಧಿ, ಅಂತ್ಯಸಂಸ್ಕಾರ ಮುಂತಾದವು.
- ಋ) ಸಮಸ್ಯೆ-ಸಮಾಧಾನ ಕಾರ್ಯಕ್ರಮಗಳು.

❖ ಎಲ್ಲ ಜಾತಿ, ಮತ, ಪಂಥಗಳವರಿಗೂ ಪ್ರವೇಶಾವಕಾಶ ಉಂಟು.

ವ್ಯವಹರಿಸುವ ವಿಳಾಸ :

ಕಾರ್ಯದರ್ಶಿ, ಬಸವ ತತ್ತ್ವ ತರಬೇತಿ ಶಿಬಿರ

ಬಸವ ಗಂಗೋತ್ರಿ

ಕುಂಬಳಗೋಡು-560074 ಬೆಂಗಳೂರು-ಮೈಸೂರು ಹೆದ್ದಾರಿ,
ಬೆಂಗಳೂರು ದಕ್ಷಿಣ-ತಾಲ್ಲೂಕು, ಬೆಂಗಳೂರು-ಜಿಲ್ಲೆ

ವಿಶೇಷ ಸೂಚನೆ:— ಶಿಬಿರಾರ್ಥಿಗಳು ತಮ್ಮೊಡನೆ ನೋಟ್‌ಬುಕ್-ಪೆನ್ನು, ಹಾಸಿಗೆ-ಹೊದ್ದಿಕೆ, ಊಟದ ತಟ್ಟೆ-ಲೊಟ, ತಂಬಿಗೆ-ವೈಯಕ್ತಿಕ ಪೂಜಾಸಾಮಗ್ರಿ ತರಬೇಕು.

ಪ್ರವಚನ ತರಬೇತಿ

ಉತ್ತಮ ಉಪದೇಶಕರ ಕೊರತೆಯಿರುವ ಸನ್ನಿವೇಶದಲ್ಲಿ ಅಂತಹವರನ್ನು ತರಬೇತಿಗೊಳಿಸಲೋಸುಗ ಸುಮಾರು 20 ವಿಷಯಗಳನ್ನು ಕುರಿತು ಪ್ರವಚನ ತರಬೇತಿಯನ್ನು ಪೂಜ್ಯ ಮಾತೆಯವರು ಮಾಡಲಿಕ್ಕೆ ನೋಟ್ಸ್ ಸಹಿತ ಪ್ರವಚನ ತರಬೇತಿಯನ್ನು ಪೂಜ್ಯ ಮಾತೆಯವರು ಕೊಡಲಿದ್ದಾರೆ.

ಭಕ್ತಿಪಕ್ಷದ ಸಮಾವೇಶ ಜರುಗುವ ತಾಣ

"ಬಸವ ಗಂಗೋತ್ರಿ"—ಒಂದು ದಿವ್ಯ ಕ್ಷೇತ್ರ, ಅರುಹಿನ ಆಗರವಾಗಿ, ಬಸವತತ್ತ್ವ ಪ್ರಸಾರ ಮಾಡುವ ಒಂದು ಕೇಂದ್ರವಾಗಿ ಬೆಳೆಯುತ್ತಿದೆ. ಇದು ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ ೨೧ಕಿ.ಮೀ. ದೂರದಲ್ಲಿ ಬೆಂಗಳೂರು ಮೈಸೂರು ಹೆದ್ದಾರಿಯ ಮೇಲೆ ಕುಂಬಳಗೋಡು ಗ್ರಾಮದ ಬಳಿ ಇದೆ. ೨.೨ ಎಕರೆ ಸುಂದರ ಪ್ರದೇಶದಲ್ಲಿರುವ ಬಸವಗಂಗೋತ್ರಿ ಮುಂದೆ ಭವ್ಯವಾದೊಂದು "ಬಸವೇಶ್ವರ ಸ್ಮಾರಕ" ವನ್ನು ಹೊಂದಲಿದೆ. ಅಲ್ಲಿ ಸಾಕಷ್ಟು ಕಟ್ಟಡಗಳು ರಚನೆಯಾಗಿದ್ದು ಬಂದವರು ನಾಲ್ಕಾರು ದಿನ ಉಳಿಯಲು ಎಲ್ಲ ಅನುಕೂಲ ವಿರುವ ಪ್ರಶಾಂತ ತಾಣವಾಗಿದೆ. ಗ್ರಂಥಾಧ್ಯಯನಕ್ಕೆ ಸುಂದರ ಲೈಬ್ರರಿ ಇದೆ. ಬೆಂಗಳೂರಿನಲ್ಲಿರುವ ಕಲಾಸಿಪಾಳ್ಯಂ ಸಿಟಿ ಮಾರ್ಕೆಟ ಬಸ್‌ಸ್ಟ್ಯಾಂಡ್‌ನಿಂದ ರೂಟು ನಂ. ೨೨೫,೨೨೬,೨೨೭, ಮತ್ತು ೨೨೮ ಬಸ್ಸುಗಳು ಗಂಗೋತ್ರಿಗೆ ಬರುತ್ತವೆ. ಕೆಲವು ಬಸ್ಸುಗಳು ಆಶ್ರಮದ ಪ್ರವೇಶದ್ವಾರದಲ್ಲಿ ನಿಲ್ಲುತ್ತವೆ. ಮತ್ತೆ ಕೆಲವು ದೊಡ್ಡಾಲದ ಮರದ ಕ್ರಾಸಿನ ಬಳಿ ನಿಲ್ಲುತ್ತವೆ. ಅಲ್ಲಿಂದ ಸ್ವಲ್ಪ ಮುಂದೆ ನಡೆದರೆ ಬಸವಗಂಗೋತ್ರಿಯ ಪ್ರವೇಶದ್ವಾರವಿದೆ. ಹೆಚ್ಚಿನ ವಿವರಗಳಿಗೆ ಬರೆಯಿರಿ.

ಕಾರ್ಯದರ್ಶಿ, ವಿಶ್ವಕಲ್ಯಾಣ ಮಿಷನ್
ಬಸವ ಮಂಟಪ, ೨ನೆ ಬ್ಲಾಕು
ಕಾರ್ಡ್‌ರೋಡ್, ರಾಜಾಜಿನಗರ
ಬೆಂಗಳೂರು-೫೬೦೦೧೦

ಕಾರ್ಯದರ್ಶಿ, ಬಸವಗಂಗೋತ್ರಿ
ಕುಂಬಳಗೋಡು-೫೬೦೦೭೪
ಬೆಂಗಳೂರು-ಮೈಸೂರು ಹೆದ್ದಾರಿ
[೨೧ ಕಿ.ಮಿ.]
ಬೆಂಗಳೂರು ದಕ್ಷಿಣ-ತಾಲ್ಲೂಕು
ಬೆಂಗಳೂರು-ಜಿಲ್ಲೆ

: ಶಿಬಿರಾರ್ಥಿಗಳಿಗೊಂದು ಸೂಚನೆ :

ಬೇರೆ ಊರುಗಳಿಂದ ಬರುವ ಶಿಬಿರಾರ್ಥಿಗಳು, ಮೆಜೆಸ್ಟಿಕ್ ಬಸ್ ಸ್ಟಾಂಡಿನಲ್ಲಿ ಇಳಿದು, ಅಲ್ಲಿಂದ ಸಿಟಿಮಾರ್ಕೆಟ್ ಬಳಿಯ ಕಲಾಸಿಪಾಳ್ಯಂ ಬಸ್ ಸ್ಟ್ಯಾಂಡಿನಿಂದ ಸೀದಾ ಬಸವಗಂಗೋತ್ರಿಗೆ ಸಿಟಿಬಸ್ಸಿನಲ್ಲಿ ಬರಬಹುದು.

ಇಲ್ಲವೇ ಬೆಂಗಳೂರಿನ ರಾಜಾಜಿನಗರದ ಎರಡನೆಯ ಬ್ಲಾಕಿನ ನವರಂಗ್ ಟಾಕೀಸಿನ ಹತ್ತಿರದಲ್ಲಿರುವ ಬಸವ ಮಂಟಪಕ್ಕೆ ಬಂದಿಳಿದು, ನಂತರ ಬಸವ ಗಂಗೋತ್ರಿಗೆ ಬರಬಹುದು.

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರ

" ೫೫ ನೆಯ ವರ್ಧಂತಿ ಕಾರ್ಯಕ್ರಮ "

ಗಣೇಶ ಚವತಿಯಂದು ಜನ್ಮಿಸಿ, ಇಲ್ಲಿಗೆ ೫೫ ವರುಷಗಳನ್ನು ದಾಂಟಿರುವ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಚೇರ್ಮನ್ನರು, ಅಪೂರ್ವ ಪ್ರವಚನಕಾರರೂ ಆದ

ಪರಮ ಪೂಜ್ಯ ಶ್ರೀ ಶ್ರೀ

ಸದ್ಗುರು ಲಿಂಗಾನಂದ ಸ್ವಾಮಿಗಳವರ

೫೫ ನೆಯ ವರ್ಧಂತಿ ಉತ್ಸವವನ್ನು ಬಸವ ಮಂಟಪದಲ್ಲಿ, ೧೮-೯-೮೫ ರಂದು ಆಚರಿಸಲಾಗುವುದು.

ಬೆಳಿಗ್ಗೆ ೧೦ ಗಂಟೆಗೆ ಪಾದಪೂಜಾ ಕಾರ್ಯಕ್ರಮವು ಬೆಂಗಳೂರು-ಮೈಸೂರು ಹೆದ್ದಾರಿಯ ೨೧ ಕಿ. ಮೀ. ದೂರದಲ್ಲಿ, ಕುಂಬಳಗೋಡು ಗ್ರಾಮದ ಸಮೀಪದಲ್ಲಿರುವ ಬಸವ ಗಂಗೋತ್ರಿಯಲ್ಲಿ ನಡೆಯುವುದು.

ರಾಜಾಜಿನಗರದ ಕಾರ್ಡ್‌ರೋಡ್ ಎರಡನೇ ಬ್ಲಾಕಿನಲ್ಲಿರುವ ಬಸವ ಮಂಟಪದಲ್ಲಿ ಸಂಜೆ ೬-೩೦ ಕ್ಕೆ **ನುಡಿ ಕಾಣಿಕೆ** ಸಮರ್ಪಣೆ

ಪ್ರಥಮ ಮಹಿಳಾ ಜಗದ್ಗುರು, ಪೂಜ್ಯ ಮಾತೆ ಮಹಾದೇವಿ ಯವರ ನೇತೃತ್ವದಲ್ಲಿ ಕಾರ್ಯಕ್ರಮಗಳು ಜರುಗುವುವು.

ಅಧ್ಯಕ್ಷತೆ: **ಶ್ರೀ ಐ. ಎಂ ಮುಗಡುಮ್**
[ವೀರಶೈವ ಮಹಾಸಭಾ ಅಧ್ಯಕ್ಷರು.]

ಮುಖ್ಯ ಅತಿಥಿ : ಶ್ರೀ ಮ ನಿ ಪ್ರ. ಶಿವರುದ್ರ ಸ್ವಾಮಿಗಳು
[ಬೇಲಿ ಮಠ, ಬೆಂಗಳೂರು]
ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ [ಶಾಸಕರು.]

ಭಾಷಣಕಾರರು : **ಶ್ರೀ ಶ್ರದ್ಧಾನಂದರು**
ಶ್ರೀ ಶಿವರಾಜ ಪಾಟೀಲರು.

ಸರ್ವರಿಗೂ ಸುಸ್ವಾಗತ

ಗುರುವಾಣಿ

ಸಂಗ್ರಹ :— ಮಂಗಳಾದೇವಿ ಕಪ್ಪರದ.

[ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮಿಗಳು ಪ್ರವಚನದಲ್ಲಿ ಉಪದೇಶಿಸಿದ ವಿಚಾರ ದೀಪ್ತಿ.]

1. ಸಂಪ್ರದಾಯಕ್ಕಿಂತ ಸತ್ಯ ಶ್ರೇಷ್ಠ ; ಸತ್ಯಕ್ಕಿಂತಲೂ ಕಲ್ಯಾಣ ಶ್ರೇಷ್ಠ.

2. ಸತ್ಯಾರ್ಥ ನಿರ್ಣಯದಲ್ಲಿ ಶಬ್ದ ಪ್ರಮಾಣಕ್ಕಿಂತ ಅನುಭವ ಪ್ರಮಾಣ ಶ್ರೇಷ್ಠ.

3. ನಂಬಿದ್ದನ್ನೇ ಸತ್ಯವೆಂದು ಸಾಧಿಸುವವನು ಮತಾಂಧ; ಸತ್ಯವನ್ನೇ ನಂಬುವವನು ಮತಿವಂತ.

4. ಹಿಂದುತ್ವ ಎನ್ನುವುದು ಧರ್ಮವಾಚಕ ಪದವಲ್ಲ. ಇದು ಜನಾಂಗ ವಾಚಕ ಅಥವಾ ಪರಂಪರಾ ಸೂಚಕ ಪದ.

5. ಜಾತಿಯ ಕಾರ್ಗತ್ತಲೆಯನ್ನು ಓಡಿಸಲು ಧರ್ಮದ ದೀಪ್ತಿಯೇ ಬೇಕು. ಜಾತಿಯ ರೋಗಕ್ಕೆ ಧರ್ಮಾಮೃತವೇ ಮದ್ದು.

6. ಸತ್ತ ಸಂಪ್ರದಾಯವು [Dead tradition] ಗುಂಡಿಯಲ್ಲಿ ನಿಂತ ನೀರಿನಂತೆ. ಸತ್ ಸಂಪ್ರದಾಯವು [True tradition] ಹರಿಯುವ ನೀರಿನಂತೆ. ವಿವೇಕಿಗಳು ಗುಂಡಿಯಲ್ಲಿ ಮಲೆತು ನಿಂತ ನೀರನ್ನು ಕುಡಿಯದೆ ಹರಿಯುವ ನೀರನ್ನು ಕುಡಿಯಲಿಚ್ಛಿಸುವಂತೆ ತಿಳುವಳಿಕೆಯುಳ್ಳವರು ಸತ್ತ ಸಂಪ್ರದಾಯವನ್ನು ಅವಲಂಬಿಸದೆ ಸತ್ ಸಂಪ್ರದಾಯವನ್ನು ಅವಲಂಬಿಸಬೇಕು.


7. ಟ್ರೇನ್ ಓಡಲು ಎರಡು ಹಳಿಗಳು ಅವಶ್ಯಕ; ಅದರಂತೆ ಧರ್ಮವೆಂಬ ಟ್ರೇನ್ ಓಡಲು ಧರ್ಮಗುರು ಮತ್ತು ಧರ್ಮಗ್ರಂಥವೆಂಬ ಎರಡು ಹಳಿಗಳು ಅವಶ್ಯಕ.

8. ಪಿಂಡಾಂಡಕ್ಕೆ ತಂದೆ-ತಾಯಿಯರು ಇರುವಂತೆ, ಬ್ರಹ್ಮಾಂಡಕ್ಕೂ ತಂದೆ-ತಾಯಿಯರು ಇರಲೇ ಬೇಕು. ಪರಶಿವನು ನಿಮಿತ್ತ ಕಾರಣನಾದರೆ ಪರಾಶಕ್ತಿಯು ಉಪಾದಾನ ಕಾರಣವಾಗಿ ಬ್ರಹ್ಮಾಂಡವು ರಚಿತವಾಗಿದೆ.

9. ವರ್ಣಾಶ್ರಮ ಜಾತಿ ಪದ್ಧತಿ ದೇವನಿರ್ಮಿತವಲ್ಲ, ಮನುಷ್ಯ ಕಲ್ಪಿತ.

10. ವರ್ಣಾಶ್ರಮ ಸಮಾಜ ಶಾಸ್ತ್ರವು ಶ್ರೇಣಿ [Ladder type of society] ಪದ್ಧತಿಯನ್ನು ಪ್ರತಿಪಾದಿಸಿದರೆ ಬಸವ ಧರ್ಮದ ಸಮಾಜ ಶಾಸ್ತ್ರವು ಸಮಪಾತಳಿಯ [Horizontal type of society] ಪದ್ಧತಿಯನ್ನು ಪ್ರತಿಪಾದಿಸುತ್ತದೆ.

Reg No. BGW 92



ಆಂಧ್ರ ಪ್ರದೇಶದ ತಾಂಡೂರಿನಲ್ಲಿ ದಿ 20-8-1985 ರಂದು ಶ್ರೀ ಬಸವೇಷ್ಟ ಪೂಜೆ ಮಾಡುತ್ತಿರುವ ಪೂಜ್ಯ ಶ್ರೀ ಮಾತೆ ಗಂಗಾದೇವಿ ಅವರು

KALYANA KIRANA OFFICE
"Basava Gangotri". Kumbalagod-560 074
Bangalore-Mysore Highway (21 k.m.)
Bangalore South Taluk, Bangalore District.